

**ಅಕ್ಷತಾ ಕೃಷ್ಣಮೂರ್ತಿ**

ಕಲೆ: ಎಸ್.ಎಸ್. ಕಾಖಂಡಕಿ

# ಚಳಿಗೆ ಅದರುವ ಪದಗಳು



ನಜರೆತ್ತಿ ನಾ
ನೋಡುತ್ತಿದ್ದಂತೆ
ನಖರೆ ಮಾಡುವ
ನೀನು
ಚಳಿ
ಆಗಾಗ
ನಕಾಬು ತೊಡುವುದು
ಸರಿಯೇನು!?

ಚಳಿ ನಿನ್ನ
ನೆನಪೆಂಬ ಸರಂಜಾಮು
ತುಂಬಿಕೊಂಡು
ದಾಟುತ್ತಿದ್ದೇನೆ ಇರುಳ

ಮೂಡಣದ ಗಾಳಿಯ
ಸೆರಗೊಳಗೆ
ಅಡಗಿ ಕುಳಿತಿದೆ
ಚಳಿ
ನಿಶ್ಯಬ್ದ ಕಣಿವೆಯ
ಅರ್ಥ ಹುಡುಕುತಿದೆ

ರೆಂಬೆಗೂ ಕಂಪನ
ಚಳಿಯ ಕುಳ್ಳಿಸಿಕೊಂಡು
ಹಣ್ಣೆಲೆ ಉದುರುವ
ಸಪ್ಪಳ
ಇದು ಮಾಗಿ ಮೋಹ

ಮಾತು ಕಡಿಮೆ
ಮಾಡಿ ನೋಟದಲ್ಲೆ
ಕೊಲ್ಲುವಂತಹ
ಒಲವೆಸೆವ
ಚಳಿ
ನಿನ್ನ
ನೋಡಿ
ಎದೆ ಬಡಿತ
ಮಿತಿಮೀರಿ
ಬೆಳೆಯುತಿದೆ
ಇರುಳು ದಾಟಿದಂತೆ

ಎಷ್ಟೊ ಯುಗ
ಇರುಳು
ದಾಟಿದವು
ಚಳಿ
ನೀ ಹುಟ್ಟದೆ
ನಲುಗಿದವು
ಹೂಗಳು
ನೆಲೆಯೂರಲು
ಎದೆ ಊರಿಲ್ಲದೆ

ಚಂದ್ರನೆಂದರೆ
ತಂಪು ಎಂದಿದ್ದೆ
ಚಳಿ ಎಂದರೆ
ನಿನ್ನ ನೆನಪು
ಹೇಳಲು ಮರೆತೆ

ಕಣಿವೆಯಲ್ಲಿ
ಮೆಲ್ಲ
ಚಳಿ
ಗಾಲ
ದ ಹೊತ್ತಲ್ಲಿ
ನಿನ್ನ ನೆನಪಿನ
ಅಗ್ಗಿಷ್ಟಿಕೆ
ಉರಿ
ಯುವುದು
ಸೋಜಿಗವಲ್ಲದೆ
ಬೇರೆನೂ ಅಲ್ಲ...

ಅರೆ
ಬಾಗಿಲಲಿ
ಇಣುಇಣುಕಿ
ನೋಡುತ್ತಿರುವ ನೀನು
ಚಳಿ
ಬರಮಾಡಿಕೊಂಡು
ಬರಸೆಳೆದು
ಮುತ್ತಿಕ್ಕುವ
ಪರಿ
ಒಲವಿನ
ಗುರುತೇನು...!?

ಚಳಿಯೆಂದರೆ
ಇಷ್ಟೇ
ಸಖ
ಗಾಳಿಯಲಿ
ಋತು
ಬರೆದ
ಕನ್ನಡದ ಸಹಿ